ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:2409/2015

ಚಾಸಾ:1 ಪ್ರಾಸಾ:2

ದಿನಾಂಕ: 14.07.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶೇಷಿ |
| ತಂದೆಯ ಹೆಸರು | : | ತಿಮ್ಮ ಪೂಜಾರಿ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಮನೆಯಲ್ಲಿ ಇರುವುದು |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಆರೋಪಿತರು ಇಲ್ಲಿ ಯಾಕೆ ತಿರುಗುತ್ತೀಯಾ ಇದು ನಮ್ಮ ಜಾಗ ಎಂದು ಹೇಳಿ ಮೀನು ಮುಳ್ಳನ್ನು ಜಾಗದಲ್ಲಿ ಹಾಕಿರುತ್ತಾರೆ. ಸದ್ರಿ ಜಾಗದಲ್ಲಿ ನಾವು ಸುಮಾರು 50-60 ವರ್ಷದಿಂದ ಇದ್ದೇವು. ಅನಂತರ ನನ್ನನ್ನು 2ನೇ ಆರೋಪಿ ದೂಡಲು ಬಂದು ಬೈದು, ತಿರುಗಿದರೆ ಕೈ ಕಾಲು ಮುರಿಯುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ಆಗ ನನ್ನ ಅಕ್ಕ ಬಂದು ನನ್ನನ್ನು ರಕ್ಷಿಸಿರುತ್ತಾರೆ. ನಾನು ಧರಿಸಿದ್ದ ನೈಟಿಯನ್ನು ಹರಿದಿರುತ್ತಾರೆ. ನನ್ನ ಕಾಲು, ಕೈಗೆ ಪೆಟ್ಟಾಗಿರುತ್ತದೆ. ಆಗ ಅಕ್ಕಪಕ್ಕದವರು ಹಾಜರು ಇದ್ದರು. ಆಗ ನಾನು ಹೆಬ್ಬೆಟ್ಟು ಲಗತ್ತಿಸಿರುತ್ತೇನೆ. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ. ಅನಂತರ ನಾನು ಸರಕಾರಿ ಆಸ್ಪತ್ರೆಗೆ ದಾಖಲಾಗಿರುತ್ತೇನೆ.

ಸಾಕ್ಷಿ ಮುಮಾ1ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ವಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ನಾನು ಚಾಸಾ-2 ಮತ್ತು 3 ರವರೊಂದಿಗೆ ವಾಸವಿದ್ದೇನೆ ಎಂದರೆ ಸರಿ.ದಿಃ 10-02-2015 ರಂದು ನಾನು ಅಂಗಡಿಗೆ ಹೋಗಿ ಬರುತ್ತಿದ್ದೆ ಎಂದರೆ ಸರಿ. ಆರೋಪಿತರು ಚಾಸಾ-4 ರವರ ಜಾಗದಲ್ಲಿ ಜಗಳ ಮಾಡುತ್ತಿದ್ದರು ಎಂದರೆ ಸರಿ. ನಾನು ಅಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ನೀನು ರಸ್ತೆಯಲ್ಲಿ ಓಡುಡಾತ್ತೀಯಾ ಎಂದು ಹೇಳಿ 1ನೇ ಆರೋಪಿ ಕೈಯಿಂದ ದೂಡಿರುತ್ತಾರೆ ಎಂದರೆ ಸರಿ. ಆಗ ನನ್ನ ಸೊಂಟಕ್ಕೆ ಪೆಟ್ಟಾಗಿರುತ್ತದೆ ಎಂದರೆ ಸರಿ. ಅನಂತರ ಚಾಸಾ-2ರವರು ನನ್ನ ಪರವಾಗಿ ಪೊಲೀಸರಿಗೆ ಅರ್ಜಿ ನೀಡಿರುತ್ತಾರೆ ಎಂದರೆ ಸರಿ. ಆರೋಪಿತರು ಓಡಾಡಲು ಯಾವಾಗಲೂ ಅಡೆತಡೆ ಮಾಡುತ್ತಾರೆ ಎಂದರೆ ಸರಿ.

ಆರೋಪಿತರು ಸದ್ರಿ ದಿನ ಅವಾಚ್ಯವಾಗಿ ನಿಂಧಿಸಿರುತ್ತಾರೆ ಎಂದರೆ ಸರಿ. ಸದ್ರಿ ದಿನ ಚಾಸಾ-4 ರವರ ಮೇಲೂ ಆರೋಪಿತರು ನೆಲಕ್ಕೆ ಒತ್ತಿ ಹಿಡಿದು ಹಲ್ಲೆ ನಡೆಸುತ್ತಿದ್ದರು ಎಂದರೆ ಸರಿ. ಆಗ ಚಾಸಾ-2 ರವರು ಬಂದು ನನ್ನನ್ನು ಬಿಡಿಸಿರುತ್ತಾರೆ ಎಂದರೆ ಸರಿ. ಆಗ ಚಾಸಾ-2 ರವರು ಧರಿಸಿದ್ದ ನೈಟಿಯನ್ನು ಆರೋಪಿತರು ಹರಿದಿರುತ್ತಾರೆ ಎಂದರೆ ಸರಿ. ಚಾಸಾ-2 ರವರ ಮೇಲೂ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಅನಂತರ ಜನರು ಬರುವುದನ್ನು ನೋಡಿ ಆರೋಪಿತರು ಬಿಟ್ಟು ಹೋಗಿರುತ್ತಾರೆ ಎಂದರೆ ಸರಿ. ಇದರಿಂದ ಚಾಸಾ-2ರವರಿಗೆ ಮಾನಕ್ಕೆ ಕುಂದು ಉಂಟು ಮಾಡಿರುತ್ತಾರೆ ಎಂದರೆ ಸರಿ.

ಪೊಲೀಸರು ದಿಃ 03-08-2015 ರಂದು ಪಂಚನಾಮೆಗೆ ಬಂದಿದ್ದು, ಪಂಚನಾಮೆಯನ್ನು 4-15 ರಿಂದ 5 ಗಂಟೆಯವರೆಗೆ ಜರುಗಿಸಿ ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದಿರುತ್ತಾರೆ ಎಂದರೆ ಸರಿ. ಅನಂತರ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿ.

<u>**ವಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದಃ**</u>

ಆರೋಪಿತರು ನಮ್ಮ ಮೇಲೆ ಸುಮಾರು 5-6 ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಸುಮಾರು 10-20 ವರ್ಷಗಳಿಂದ ನಮ್ಮ ನಡುವೆ ದಾರಿ ವಿಚಾರವಾಗಿ ತಕರಾರು ಇರುತ್ತದೆ. ಸದ್ರಿ ಸ್ಥಳದ ಸರ್ವೆ ನಂಬ್ರ ನನಗೆ ತಿಳಿದಿಲ್ಲ. ಸದ್ರಿ ದಾರಿ ಇರುವ ಜಾಗ ಶ್ರೀನಿವಾಸ ಆಚಾರ್ಯರವರ ಹೆಸರಿನಲ್ಲಿ ಇರುತ್ತದೆ. ಸದ್ರಿ ಸ್ಥಳಕ್ಕೆ ಸಂಬಂಧಿಸಿದ ಪಹಣಿಯನ್ನು ನಾನು ಪೊಲೀಸರಿಗೆ ಹಾಜರುಪಡಿಸಿಲ್ಲ. ಸದ್ರಿ ನಾನು ಅಂಗಡಿಗೆ ಸಾಮಾನು ತರಲು ಹೋಗಿದ್ದೆ. ಆ ದಿನ ನಾನು ಚಾಪುಡಿ ಮತ್ತು ಸಕ್ಕರೆ ತರಲು ಹೋಗಿರುತ್ತೇನೆ. ಆ ದಿನ ಸದಾನಂದ ಹವಲ್ದಾರ್, ನಾಗರತ್ನ ಮತ್ತು ಇಬ್ಬರು ಮಕ್ಕಳು ಇದ್ದರು. ಸದಾನಂದರವರ ಕೈಯಲ್ಲಿ ಕೋಲು ಇತ್ತು. ಹೆಂಡತಿ ಬಳಿ ಕಲ್ಲು ಇತ್ತು. ಮಕ್ಕಳ ಬಳಿ ಕೋಲು ಇತ್ತು.

ಸದಾನಂದರವರ ಹೆಂಡತಿ ಮಕ್ಕಳು ನನಗೆ ಕೈ ಕಾಲು ಮತ್ತು ಬೆನ್ನಿಗೆ ಹೊಡೆದಿರುತ್ತಾರೆ. ಸದ್ರಿ ದಿನ ನಾನು ತರುತ್ತಿದ್ದ ಎಲ್ಲಾ ಸಾಮಾನುಗಳು ನೆಲಕ್ಕೆ ಬಿದ್ದಿರುತ್ತದೆ. ಘಟನೆ ನಡೆದ ದಿನ ನಾನು ನೈಟಿಯನ್ನು ಧರಿಸಿದ್ದೆ. ನ್ಯಾಯಾಲಯದ ಮುಂದೆ ಇರುವ ನೈಟಿ ನನ್ನದ್ದು ಅದನ್ನು ಎಳೆದಾಗ ಹರಿದು ಹೋಗಿರುತ್ತದೆ. ನೈಟಿಯನ್ನು 2ನೇ ಆರೋಪಿ ಎಳೆದಿರುತ್ತಾರೆ. ಆಗ ನನಗೆ ರಕ್ತ ಬರುವ ಗಾಯವಾಗಿರುತ್ತದೆ. ನಾನು ಕೂಗಿರುತ್ತೇನೆ. ನೈಟಿಗೆ ರಕ್ತ ತಾಗಿರುತ್ತದೆ. ನಾನು ಪ್ರಜ್ಞೆ ತಪ್ಪಿದೆ. ಅನಂತರ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದಿರುತ್ತದೆ. ಆದ್ದರಿಂದ ಮಧ್ಯದಲ್ಲಿ ಏನಾಯಿತು ಎಂದು ನನಗೆ ತಿಳಿದಿಲ್ಲ. ಅನಂತರ ಕೋಲನ್ನು ಪೊಲೀಸರು ತೋರಿಸಿರುತ್ತಾರೆ.

ಪೊಲೀಸರಿಗೆ ಅಕ್ಕಪಕ್ಕದವರು ಹಾಗೂ ಚಾಸಾ-2ರವರು ಹೇಳಿಕೆ ನೀಡಿರುತ್ತಾರೆ. ಪ್ರಜ್ಞೆ ತಪ್ಪಿ ದ ನಂತರ ಸ್ಥಳದಲ್ಲಿ ಬೇರೇನು ನಡೆದಿದೆ ಎಂದು ನನಗೆ ತಿಳಿದಿಲ್ಲ. ದೂರನ್ನು ಯಾರು ನೀಡಿರುತ್ತಾರೆ ಎಂದು ನನಗೆ ತಿಳಿದಿಲ್ಲ. ಆರೋಪಿತರು ನನ್ನನ್ನು ಅಡ್ಡಗಟ್ಟಿ ಹೊಡೆದು, ನೈಟಿ ಹರಿದು, ಅವಾಚ್ಯವಾಗಿ ನಿಂಧಿಸಿ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ತೊಂದರೆ ಆಗದೆ ಇದ್ದರೂ ವೈದ್ಯರ ಬಳಿ ನಟಿಸಿರುತ್ತೇನೆ ಎಂದರೆ ಸರಿಯಲ್ಲ. ಈಗ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಜಾಗದ ಬಗ್ಗೆ ತಕರಾರು ಇದ್ದ ಕಾರಣ ಪಿರ್ಯಾದುವನ್ನು ದಾಖಲಿಸುತ್ತೇವೆ ಎಂದರೆ ಸರಿ. ನಾನು ಹೆಬ್ಬೆಟ್ಟು ಲಗತ್ತಿಸುತ್ತೇನೆ. ನನಗೆ ಓದಲು ಬರೆಯಲು ಆಗುವುದಿಲ್ಲ. ಹೆಬ್ಬೆಟ್ಟು ಲಗತ್ತಿಸಿದ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ. ಕೋಲಿನಿಂದ ನನಗೆ ಆರೋಪಿತರು ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**